**ಓಎಸ್. ನಂ.*202/2022***

**ಡಿಡಬ್ಲ್ಯೂ:*01***

**ಇಂದು ದಿನಾಂಕ:*21.02.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : ವಾದಿ ಪರ ಶ್ರೀ.ಕೆ.ಆರ್.ಕೆ.ವಕೀಲರಿಂದಃ</u>**

ನಾನು 8 ನೇ ತರಗತಿ ಓದಿದ್ದೇನೆ. ವಾದಿ ಅವಿದ್ಯಾವಂತರು ಎಂದರೆ ಸರಿ. ನನ್ನ ತಂದೆ ತಾಯಿ ಅವಿದ್ಯಾವಂತರು ಎಂದರೆ ಸರಿಯಲ್ಲ, 2 ನೇ ತರಗತಿ ಓದಿದ್ದರು. ನನ್ನ ತಂದೆ ತಾಯಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಹೆಬ್ಬೆರಳು ಗುರುತು ಹಾಕುತ್ತಿದ್ದರು. ನನ್ನ ತಂದೆ ತಾಯಿ ಹೆಬ್ಬೆರಳು ಗುರುತು ಹಾಕುತ್ತಿದ್ದುದರಿಂದ ಅವಿದ್ಯಾವಂತರಾಗಿರಬಹುದು. ವಾದಿ 2000 ಇಸವಿಯಿಂದ ಬೇರೆ ಇದ್ದಾರೆ. ವಾದಿ ವಾಸವಿರುವ ಮನೆಯಲ್ಲಿ ನಮಗೂ ಹಕ್ಕು ಇದೆ. ವಾದಿ ವಾಸವಿರುವ ಮನೆ ದಾವಾ ಐಟಂ.2 ರ ಸರ್ವೆ ನಂ.278/11 ರಲ್ಲಿ ಇದೆ. ಸದರಿ ಮನೆಯನ್ನು ವಾದಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ, ನಮ್ಮ ತಂದೆ ಕಟ್ಟಿದ್ದಾರೆ. ದಾವಾ ಐಟಂ.2 ರ ಆಸ್ತಿಯನ್ನು ನಮ್ಮ ತಂದೆ 1978-79 ರಲ್ಲಿ ಕ್ರಯಕ್ಕೆ ಪಡೆದಿದ್ದರೂ ಎಂದರೆ ಸರಿ. ದಾವಾ ಐಟಂ.2 ರಲ್ಲಿ ಇರುವ ಮನೆಯಲ್ಲಿ ನಮ್ಮ ತಂದೆ ತಾಯಿ, ವಾದಿ ಮತ್ತು ನಾವೆಲ್ಲರೂ 2000 ಇಸವಿವರೆಗೆ ನಾವೆಲ್ಲರೂ ವಾಸವಿದ್ದೇವು ಎಂದರೆ ಸರಿ. ಸಾಕ್ಷಿಯೂ ಸ್ವತಃ ಹೇಳುವುದೇನೆಂದರೆ ಈಗಲೂ ಸಹಾ ಅಲ್ಲೇ ವಾಸವಿದ್ದೇನೆ. ದಾವಾ ಐಟಂ.2 ರಲ್ಲಿ 2 ವಾಸದ ಮನೆಗಳು ಮತ್ತು 2 ತಂಬಾಕು ಬ್ಯಾರನ್ ಇವೆ ಎಂದರೆ ಸರಿ. ಸದರಿ 2 ಮನೆಗಳ ಪೈಕಿ 1 ರಲ್ಲಿ ವಾದಿ ವಾಸಮಾಡುತ್ತಿದ್ದು, ಇನೊಂದರಲ್ಲಿ ನಾನು ವಾಸವಿದ್ದೇನೆ ಎಂದರೆ ಸರಿ. 2 ಮನೆ ಮತ್ತು ಬ್ಯಾರನ್ ಕಟ್ಟಿರುವ ಜಾಗ ಹೊರತು ಪಡಿಸಿ ಉಳಿದ ಜಾಗ ಖಾಲಿ ಇದೆ ಎಂದರೆ ನಾನು ಇನೊಂದು ಸ್ವಂತ ಮನೆ ಕಟ್ಟಿದ್ದೇನೆ. 2 ಬ್ಯಾರನ್‌ಗಳ ಪೈಕಿ 1 ವಾದಿಯದ್ದು ಮತ್ತೊಂದು ನನ್ನದು ಎಂದರೆ ಸರಿಯಲ್ಲ. 2 ಬ್ಯಾರನ್‌ಗಳು ನನ್ನದೆ. ದಾವಾ ಐಟಂ.2 ರ ಪಶ್ಚಿಮ ದಿಕ್ಕಿನಲ್ಲಿ ಇರುವ ಮನೆಯಲ್ಲಿ ವಾದಿ ವಾಸವಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಸುಮಾರು 30-35 ವರ್ಷದಿಂದಲೂ ಹುಣಸೂರು ತಾಲ್ಲೂಕಿನ, ಧರ್ಮಪುರದಲ್ಲಿ ವಾಸವಿದ್ದಾರೆ ಎಂದರೆ ಸರಿ. ಅವರು ದಾವಾ ಆಸ್ತಿಯಲ್ಲಿ ವಾಸವಿರುವುದಾಗಲಿ ಅಥವಾ ಉಳುಮೆ ಮಾಡುತ್ತಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿ ಮತ್ತು ನಾನು ಸ್ವಾಧೀನ ಇದ್ದೇವೆ ಎಂದರೆ ಸರಿ.

1920 ನೇ ಇಸವಿಯಲ್ಲಿ ದಾವಾ ಐಟಂ.2 ರ ಆಸ್ತಿಗೆ ನನ್ನ ತಂದೆ ನನ್ನ ಹೆಸರಿಗೆ ವಿಲ್ ಮಾಡಿದ್ದಾರೆ. ವಾದಿ ವಾಸವಿರುವ ಮನೆಯ ಬಗ್ಗೆ ವಿಲ್ ನಲ್ಲಿ ನಮೂದಿಸಿಲ್ಲ. ವಿಲ್ ಬರೆದಿರುವುದನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ, ಪತ್ರ ನನ್ನ ಕೈಗೆ ಸಿಕ್ಕಿದ ನಂತರ ನೋಡಿದ್ದೇನೆ. ನನ್ನ ತಂದೆ ತಾಯಿ, ವಾದಿ, ನಾನು ಮತ್ತು ಸ್ವಾಮಿಗೌಡ 3 ಜನರ ಜೊತೆ ಚೆನ್ನಾಗಿ ಇದ್ದರು ಎಂದರೆ ಸರಿಯಲ್ಲ. ನನ್ನ ಜೊತೆ ಮಾತ್ರ ಚೆನ್ನಾಗಿ ಇದ್ದರು. ನನ್ನ ತಂದೆ ವಿಭಾಗ ಪತ್ರ ಮಾಡಿಲ್ಲ. ನನ್ನ ತಂದೆ ವ್ಯವಸಾಯ ಮತ್ತು ಕೂಲಿ ಮಾಡುತ್ತಿದ್ದರು. 1998 ರಲ್ಲಿ ದಾವಾ ಐಟಂ.1 ರ ಆಸ್ತಿಯನ್ನು ನನ್ನ ತಂದೆಗೆ ದರ್ಖಾಸ್ತು ಮೂಲಕ ಮಂಜೂರು ಆಗಿದೆ ಎಂದರೆ ಸರಿ. 1961 ರಿಂದಲೂ ನನ್ನ ತಂದೆ ದಾವಾ ಐಟಂ.1 ರಲ್ಲಿ ಸಾಗುವಳಿ ಮಾಡುತ್ತಿದ್ದರು. ಸಾಗುವಳಿ ಚೀಟಿ ಕೊಡುವ ಮೊದಲು ನಾನು, ವಾದಿ ಹಾಗೂ ಪ್ರತಿವಾದಿ 1 ಮತ್ತು 2 ರವರು ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ಅವರೆಲ್ಲರೂ ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದಕಾರಣ ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ.1 ರ ಆಸ್ತಿಯಿಂದ ಬಂದ ಆದಾಯದಿಂದ ದಾವಾ ಐಟಂ.2 ರ ಆಸ್ತಿಯನ್ನು ಖರೀದಿಸಿರುವುದರಿಂದ ದಾವಾ ಐಟಂ.2 ರ ಆಸ್ತಿಯೂ ಸಹಾ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ.2 ಆಸ್ತಿಗಳಲ್ಲಿ ವಾದಿಗೆ 1/3 ಭಾಗದ ಹಕ್ಕು ಇದೆ ಎಂದರೆ ಸರಿಯಲ್ಲ. ನಿ.ಪಿ.9 ರಲ್ಲಿ ಗುರುತಿಸಿರುವ ಫೋಟೊದಲ್ಲಿ ಕಂಡು ಬರುವ ಮನೆ ದಾವಾ ಐಟಂ.2 ರಲ್ಲಿ ಇದ್ದು ಅದರಲ್ಲಿ ವಾದಿ ವಾಸವಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ತಂದೆ ತಾಯಿಯ ಸ್ವಯಾರ್ಜಿತ ಆಸ್ತಿಗಳಲ್ಲ, ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸುಳ್ಳು. ಪ್ರತಿವಾದಿ 3 ಮತ್ತು 4 ರವರು ದಾವಾ ಆಸ್ತಿಗಳಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ.2 ರ ಆಸ್ತಿಯ ಸಂಬಂಧ ನನ್ನ ತಂದೆ ವಿಲ್ ಮಾಡಿರುವ ಬಗ್ಗೆ ಹೇಗೆ ಗೊತ್ತಾಯಿತು ಎಂದರೆ ನನ್ನ ತಂದೆಯೇ ವಿಲ್ ಪತ್ರ ಕೊಟ್ಟಿರುವುದರಿಂದ ಗೊತ್ತಾಯಿತು. 2014–15 ನೇ ಇಸವಿಯಲ್ಲಿ ನನ್ನ ತಂದೆಗೆ 84 ವರ್ಷ ಮತ್ತು ನನ್ನ ತಾಯಿಗೆ 72 ವರ್ಷ ಆಗಿತ್ತು. ಆ ಸಮಯದಲ್ಲಿ ನನ್ನ ತಂದೆಗೆ ಕಣ್ಣು ಕಾಣಿಸುತ್ತಿರಲಿಲ್ಲ ಮತ್ತು ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

***ಓಎಸ್. ನಂ.202/2022***

***ಡಿಡಬ್ಲೂ:01***

ಹೆಚ್ಚು ವಯಸ್ಸಾಗಿದ್ದ ಕಾರಣ ನನ್ನ ತಂದೆ ತಾಯಿ ಯಾವುದೇ ಕೆಲಸ ಮಾಡಲು ಸಾಧ್ಯವಾಗದೆ ನಿಷ್ಕರ್ತರಾಗಿದ್ದರು ಎಂದರೆ ಸುಳ್ಳು. ವಾದಿಗೆ ಸೇರುವ ಆಸ್ತಿಯನ್ನು ಲಪಟಾಯಿಸಬೇಕೆಂದು ಮತ್ತು ನನ್ನ ತಂದೆ ತಾಯಿ ಅವಿದ್ಯಾವಂತರಾಗಿರುವ ಕಾರಣ ನಿ.ಡಿ.2 ಮತ್ತು 3 ರ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ನಾನು ಸೇರಿ ನನ್ನ ತಂದೆ ತಾಯಿಗಳನ್ನು ಅನ್ಯೋನ್ಯವಾಗಿ ನೋಡಿಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ, ನಾನು ಒಬ್ಬನೇ ನೋಡಿಕೊಳ್ಳುತ್ತಿದೆ. ದಾವಾ ಐಟಂ.2 ರ ಆಸ್ತಿಗೆ ಸಂಬಂಧಿಸಿದಂತೆ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ವಾದಿ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿರ್ಭಂದಕಾಜ್ಞೆಯನ್ನು ತೆಗೆದುಕೊಂಡು ವಾದಿಯನ್ನು ಮನೆಯಿಂದ ಖಾಲಿ ಮಾಡಿಸಲು ಪ್ರಯತ್ನ ಪಟ್ಟಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ವಿಭಾಗ ಪತ್ರ ಮಾಡಿಕೊಟ್ಟಿಲ್ಲದ ಕಾರಣ ದುರುಪಯೋಗ ಪಡಿಸಿಕೊಂಡು ನಿ.ಡಿ.1 ಮತ್ತು ನಿ.ಡಿ.2 ರ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಳ್ಳಲು ಕರೆದಾಗ ನಿರಾಕರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ.1 ಮತ್ತು 2 ರ ಆಸ್ತಿಯಲ್ಲಿ ವಾದಿ 1/3 ಭಾಗ ವಿಸ್ತೀರ್ಣದಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**